ಒದಗಿಸಿ ನಮ್ಮ ಜಿಲ್ಲೆಯ ಅಭಿವೃದ್ಧಿಯನ್ನು ಹೆಚ್ಚು ಹೆಚ್ಚು ಸಾಧಿಸಬೇಕೆಂದು ಹೇಳಿ ನನಗೆ ಇಷ್ಟು ಮಾತ ನಾಡುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI D. DEVARAJ URS.—The point that was mentioned by the hon. Minister for Finance with respect to the levy of tax on Silk (powerlooms and handlooms) in Karnataka, I would like the government to keep in mind a couple of important aspects. Sir, the Karnataka State has all along been the main producer of Mulberry silk. More than three-fourth of total Mulberry Silk is produced in Karnataka. Of late, in Andhra Pradesh, about a few years back, there were hardly hundreds of acres. To-day, it is more than 30,000 acres. It is the same thing in Tamil Nadu. It was stated that this tax will be reflected in the increase in prices of silk cloth. If that was the case, in a way, we could have accepted it No doubt, it is not going to increase the price, but the silk production will be affected since outside production will come in. Secondly, when they put more taxes on powerlooms and handlooms, it is cocoon market that suffers. If the cocoon market suffers, it is the producer again who suffers. I request the government to please bear in mind all these factors before they oversimplify by saying, it is not going to be reflected in cloth price and only the people who purchase the silk will be affected. It is not so simple. If that is so, why did you levy this Coffee surcharge. This is to be paid by certain class. We could have said that it is going to affect the coffee drinkers. This is not the argument. Generally, the sericulture is an industry in areas of low rainfall and scarcity areas like Belgaum, Dharwad, Bijapur, etc. Therefore, it may not be advisable to put this tax at this stage.

Statement by Minister

re :— Fire Accident at Devaraja Market, Mysore.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಒಂದು ಗಮನ ಸೆಳೆಯುವ ಸೂಚನೆ ಕೊಡುತ್ತೇನೆ. ಅದು ಏನೆಂದರೆ ನಗರಾಡಳಿತ ಮಂತ್ರಿಗಳು ನಿನ್ನೆ ಸಕಾಲದಲ್ಲಿ ಬರುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಅವರು ಇವತ್ತು ಒಂದು ಹೇಳಿಕೆಯನ್ನು ಕೊಡುತ್ತಾರೆ.

SRI DHARAM SINGH (Minister for Housing & Urban Development).—Sir, I wish to make the following Statement :—

At 10-30 in the night on 24-3-1981 I got a message that fire had broken out in the Devaraja Market at Mysore. Immediately I contacted Mysore. I was told that all the officers were away at the Market premises. Ultimately, at about 10-45 in the night I got the

S.P. of Police on the line and he gave me some details about the incident. The fire had been completely controlled by them, and the Police were guarding the premises.

The very next morning I proceeded to Mysore. On arrival accompanied by Sri D. Balagopalan, Secretary, Housing and Urban Development, Shri Prabhakara, Divisional Commissioner, Sri S N.S. Murthy, D.I.G. of Police, Mysore, Electrical Executive Engineer, Karnataka Electricity Board, the Administrator and Commissioner, Mysore City Corporation and other officers, I visited the Devaraja Market. I went round the areas which were affected by the fire. Several affected stall-holders, local leaders of public opinion and press representatives were present during the inspections. Later on, I conducted a meeting of the affected shop owners, shop owners representatives, and other local leadere to ascertain their view points. I held discussions with all the local officers, and thereafter I met the Members of the Press to ascertain their views also.

Briefly, the incident can be narrated as follows . A few minutes prior to 18-45 hours on 24-3-1981 the fire broke out in Shop No. 8 of Block No. 2, which is located approximately in the centre of Devaraja Market stalls affected in sheds. The fire started spreading towards the south of this shop and later on to the north. The plastic, Bangles, the plastic utensils etc. in shops, in the vicinity provided fuel to the fire to spread Soon, the flower shops to the back of this shop also caught fire and uncontrollable fire was raising. Immediately on receipt of message, the Police and the Fire force went into fire fighting, isolation, evacuation, rescue and other preventive operations. Three fire engines and two water lorries with pumps, local fire brigade were pressed into service. The fire was so devastating that available engines were found inadequate. Fire engine of Mandya Sugar Factory, Ideal Jawa, water tankers and pump and two fire engines from Bangalore, one fire engine from Hassan were called out. A large number of volunteers and the Municipal Water Supply division joined the police. So the devastating fire was prevented from spreading towards the thickly populated residential areas, by bringing down the combustible roofing and other substance by the police with the help of large number of volunteers. The fire from the row of the bangle shops, spread to the flower shops, then to the fruit stalls, and then to the coconut stalls, thus covering almost the entire block No. 2, which is in the heart of the market. As a measure of precaution the owners of textiles and other shops on the western side of Sayyaji Rao Road, adjoining the market, were immediately advised by the police to evacuate and they removed their combustible goods.

Fire was brought under control after fighting about 2½ hours, under the supervision of D.I.G., S.P., Revenue and Corporation authorities and the public. The fire in the affected block was also completely extinguished by mid-night by making use of re-inforcement that arrived; fortunately, there have been no loss of life or injuries.

There are 700 shops in the Market. Out of this only 149 shops were burnt as a result of this fire. The details are as follows:

Flower Stalls-32, Plantation Stalls-31, Fruit Stalls-11, Coconut Stalls-21, Miscellaneous stalls like, Bangles, Cutlery, Cosmetics, Plastic, pooja samagries. alluminium utencils and condimental totalling-54 in all 149 shops.

Having regard to the stock of articles in the affected stalls, the loss is tentatively estimated around 8 lakh rupees. Shops belonging to the Corporation in this block are destroyed completely and the estimated damages to the Municipal property is about 10 lakh rupees. All these shops were open stalls. It is ascertained that no Insurance agency had accepted to insure them. The Corporation, Police and Revenue authorities are going into the details in assessing the damages.

After discussions with the Divisional Commissioner and other officers, the Corporation authorities, representatives of the shops affected, it is decided to take action to immediately reconstruct the burnt portion in the Market within a month. Necessary funds, cement and Zinc sheets for reconstruction are being made available to the Corporation. With a view to help the poor petty businessmen who are the victims of this fire compensation is decided to be paid to the extent of actual loss upto Rs. 250 and at 50% of loss upto Rs. 2000. The cases of those who have suffered even greater loss will be examined and decided shortly. Necessary funds are placed at the disposal of the Divisional Commissioner for immediate disbursement.

The Divisional Commissioner and the Deputy Commissioner are convening a meeting of the representatives of Nationalised Banks, to provide long-term loans for rehabilitating the shop owners.

The Police are investigating into the cause of the fire. No foul play is suspected. From the accounts I had I understand that the police, the Fire Force, the Revenue and the Corporation authorities, and most of the public themselves, have done commendable work in controlling the fire and thus reducing to the minimum, what other-

wise would have been a major disaster. Particular mention has to be made of the volunteers, Sri F.K. Irani of Ideal Jawa, the Rotary Club authorities who rendered timely spontaneous and willing service, at this hour of need.

The Market is closed for one day to facilitate assessment work. Debries will be got cleared immediately and thereafter, the stall holders will be allowed to resume their business.

5-80 P.M.

SRI D. DEVARAJA URS.—Sir, I am glad that the Minister has gone to the spot immediately and done the best of the job to provide whatever possible help that can be given. One point I would like to know from the Minister is that compensation is decided to be paid to the extent of actual loss upto Rs. 250 and at 50% of loss upto Rs. 2000/- This aspect I could not make out. I would like the Minister to kindly explain as to what it exactly means.

† ಶ್ರೀ ಧರ್ಮಸಿಂಗ್.—ಈಗ ಯಾರು ಯಾರು ೨೫೦ ರೂ.ಗಳವರೆಗೆ ಬಂಡವಾಳ ಹಾಕಿಕೊಂಡು ವ್ಯಾಪಾರ ಮಾಡುತ್ತಿದ್ದರು, ಅಂತಹವರಿಗೆ ಸೆಟ್ ಪರ್ಸೆಂಟ್ ಪರಿಹಾರ ಕೊಡುತ್ತಿದ್ದೇವೆ. ಮತ್ತು ಯಾರು ಯಾರು ಎರಡು ಸಾವಿರ ರೂಪಾಯಿಗಳವರೆಗೆ ಬಂಡವಾಳ ಹಾಕಿಕೊಂಡು ವ್ಯಾಪಾರ ಮಾಡುತ್ತಿದ್ದರು, ಅಂತಹವರಿಗೆ ೫೦ ಪರ್ಸೆಂಟ್ ಪರಿಹಾರ ಕೊಡುತ್ತೇದ್ದೇವೆ. ವಿರೋಧಪಕ್ಷದ ನಾಯಕರೂ ಸಹ ಆ ಜಾಗಕ್ಕೆ ಹೋಗಿ ನೋಡಿದ ನಂತರ ನನಗೆ ಫೋನ್ ಮೂಲಕ ಪರಿಹಾರ ಕೊಡುವ ವಿಚಾರದಲ್ಲಿ ಮಾತ ನಾಡಿದರು. ಈ ಬೆಂಕಿ ಪ್ರಕರಣದಲ್ಲಿ ೧೫೯ ಸಣ್ಣ ಸಣ್ಣ ಅಂಗಡಿಯವರಿಗೆ ನಷ್ಟವಾಗಿದೆ. ಆದಕಾರಣ ಇವರಿಗೆಲ್ಲಾ ತಾತ್ಕಾಲಿಕವಾದಂಥ ಪರಿಹಾರ ಕೊಡಬೇಕೆನ್ನುವ ಬಗ್ಗೆ ನಾನು ಮುಖ್ಯಮಂತ್ರಿಗಳ ಜೊತೆ ಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಮಾಲೋ ಚನೆ ಮಾಡಿದ್ದೇನೆ. ಪರಿಹಾರ ಕೊಡುವ ಬಗ್ಗೆ ನೆನ್ನೆ ದಿವಸವೇ ಹೇಳಬಹುದಾಗಿತ್ತು. ಆದರೆ ವಿಧಾನಸಭೆ ಮತ್ತು ವಿಧಾನಪರಿಷತ್ತು ನಡೆಯುತ್ತಿರುವ ಕಾರಣದಿಂದ ಇಲ್ಲಿ ಒಂದು ಸ್ಟೇಟ್-ಮೆಂಟ್ ಮಾಡಬೇಕಾ ಗಿತ್ತು, ಆದಕಾರಣ ಸ್ವಲ್ಪ ನಿಧಾನ ಮಾಡಲಾಯಿತು. ಈಗಾಗಲೇ ಡಿವಿಜನಲ್ ಕಮೀಷನರ್ ಅವರು ಮೈಸೂರಿನ ಜಿಲ್ಲಾಧಿಕಾರಿಯವರ ಹತ್ತಿರ ೫೦ ಸಾವಿರ ರೂ.ಗಳನ್ನು ಇದಕ್ಕಾಗಿ ಇಟ್ಟಿದ್ದಾರೆ. ಇದರ ಜೊತೆಗೆ ಅವರು ಸೌತ್-ಕೆನರಾ ಮತ್ತು ಮಂಡ್ಯದ ಜಿಲ್ಲಾಧಿಕಾರಿಯವರಿಂದ ದುಡ್ಡು ತರಿಸಿ ಇಟ್ಟಿದ್ದಾರೆ. ಈಗ ಅಲ್ಲಿನ ಕಾರ್ಪೊರೇಷನ್‌ನಲ್ಲಿ ದುಡ್ಡು ಇಲ್ಲ. ಆದಕಾರಣ ಡಿವಿಜನಲ್ ಕಮೀಷನರ್ ಅವರು ಈಗಾ ಗಲೇ ೨-೩ ಲಕ್ಷ ರೂ.ಗಳನ್ನು ಕೂಡಿಸಿಟ್ಟಿದ್ದಾರೆ. ಮತ್ತು ಹಣವನ್ನು ಕೂಡಲೇ ಕೊಡಲು ನಾವು ತಯಾರಿದ್ದೇವೆ. ಅಷ್ಟೇ ಅಲ್ಲ, ಅದಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿದ್ದೇವೆ. ಅಷ್ಟೇ ಅಲ್ಲ ಅಲ್ಲಿ ಬಿದ್ದಿ ರುವಂತಹ ಡಬ್ರೀಸ್ ಕೂಡ ಕ್ಲೀಯರ್ ಮಾಡಿ ಈ ೧೫೯ ಮಂದಿ ಕೂಡಲೇ ವ್ಯಾಪಾರ ಪ್ರಾರಂಭ ಮಾಡಲು ವ್ಯವಸ್ಥೆ ಮಾಡಿದ್ದೇವೆ. ಈ ಮೊದಲು ಈ ದೇವರಾಜ ಮಾರ್ಕೆಟ್‌ಗೆ ಸಂಬಂಧಪಟ್ಟಂತೆ ಎರಡು ಕೋಟಿ ರೂ.ಗಳ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಲಾಗಿತ್ತು. ಇದನ್ನೇ ಉಪ ಯೋಗ ಮಾಡಿಕೊಂಡು, ಅಲ್ಲಿ ಖಾಯಂ ಆದಂಥ ಒಂದು ಮಾರ್ಕೆಟ್‌ನ್ನು ಯಾವ ರೀತಿ ಕಟ್ಟಬೇಕು ಎಂಬ ತಕ್ಕಂಥ ವಿಚಾರ ಕೂಡ ಇದೆ. ಆದರೆ ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಈ ರೀತಿ ಮಾಡು ತ್ತಿದ್ದಾರೆಂಬ ಭಾವನೆ ಈ ೧೫೯ ಮಂದಿಗೆ ಬರಲಾರದಂತೆ ನಾವು ನೋಡಬೇಕಾಗಿದೆ. ಅವರೇನಾದರೂ ಬೇರೆ ಕಡೆ ವ್ಯಾಪಾರ ಮಾಡಲು ತಯಾರಾದರೆ, ನಾವು ಬಸ್ಟ್ಯಾಂಡ್ ಬಳಿ ಅವರಿಗೆ ವ್ಯವಸ್ಥೆ ಮಾಡಿಕೊಡಲು ತಯಾರಿದ್ದೇವೆ. ಆದರೆ ಅವರೇನಾದರೂ ಅಲ್ಲಿಯೇ ಇರಬರಬೇಕೆಂದರೆ ಸಧ್ಯಕ್ಕೆ ಟೆಂಪರರಿ ಸ್ಟ್ರಕ್ಚರ್ ಹಾಕಂವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಒಂದು ವೇಳೆ ಅವರ ಸಂಘದ ಅಧ್ಯಕ್ಷರು ಏನಾದರೂ...

ಶ್ರೀ ಡಿ. ದೇವರಾಜ ಅರಸ್.—ಈಗ ಈ ಮಾಸ್ಟರ್ ಪ್ಲಾನ್ ಬಹಳ ದಿವಸಗಳಿಂದ ಹಾಗೆಯೇ ಉಳಿದಿದೆ. ಈಗ ತಾವೇನಾದರೂ ಅಲ್ಲಿ ಟೆಂಪರರಿ ಸ್ಟ್ರಕ್ಚರ್ ಮಾಡಿದರೆ ಮತ್ತೆ ಈ ಮಾಸ್ಟರ್ ಪ್ಲಾನ್ ವಿಚಾರ ಮಾಡಿರಬಹುದು ಆದ್ದರಿಂದ, ಈಗ ಹೇಗೂ ಕೆಟ್ಟಿದ್ದಾಗಿದೆ, ಇದು ಆಗಿದ್ದು ಒಳ್ಳೆಯದಕ್ಕೆ ಎಂದು ತಿಳಿದುಕೊಂಡು, ಇದೇ ಸಂದರ್ಭದಲ್ಲಿ ಆ ಮಾಸ್ಟರ್ ಪ್ಲಾನನ್ನು ಜಾರಿಗೆ ತಂದು, ಅದರಂತೆ ಕಟ್ಟಡಗಳನ್ನು ಕಟ್ಟಿಸುವುದು ಒಳ್ಳೆಯದು. ಅದು ಕಟ್ಟಿ ಮುಗಿಯುವವರೆಗೆ ಈಗ ತೊಂದರೆಗೆ ಒಳಗಾಗಿರುವವರಿಗೆ ಬೇರೆ ಎಲ್ಲಿಯಾದರೂ ಜಾಗ ಇದ್ದರೆ ಕೊಡಿ. ಈ ಸಮಯದಲ್ಲಿ ಕಟ್ಟಿದ್ದರೆ ಅದು ಹಾಗೆಯೆ ಉಳಿದುಹೋಗುತ್ತದೆ. ಮತ್ತು ಮುಂದೆ ಮಾಸ್ಟರ್ ಪ್ಲಾನ್ ಪ್ರಕಾರ ಕಟ್ಟುತ್ತೀರೊ ಅಥವಾ ಇಲ್ಲವೋ ಆದಕಾರಣ ಈಗಲೇ ಮಾಡಿ ಮುಗಿಸುವುದು ಒಳ್ಳೆಯದು.

ಶ್ರೀ ಎಚ್. ಗಂಗಾಧರನ್.—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ವಿಚಾರವನ್ನೇ ನಾನೂ ಸಹ ಹೇಳುತ್ತಾ, ಈಗೇನಾದರೂ ತಾವು ಅಲ್ಲಿ ಟೆಂಪರರಿಯಾಗಿ ಕಟ್ಟಿದರೆ, ಮುಂದೆ ಅಲ್ಲಿ ಖಾಯಂ ಆಗಿ ಕಟ್ಟುವುದಕ್ಕಾಗುವುದಿಲ್ಲ. ಅದು ಹಾಗೆಯೇ ಉಳಿದುಹೋಗುತ್ತದೆ. ತಾವು ಅಲ್ಲಿಗೆ ಹೋದಾಗ ಆ ಮಾರ್ಕೆಟ್‌ನ ಪಶ್ಚಿಮ ಭಾಗವನ್ನು ತಾವು ನೋಡಿದ್ದೀರೆಂದು ಕಾಣುತ್ತದೆ ಆ ಭಾಗವೂ ಸಹ ಅನಾಹುತವಾಗುವ ಸ್ಥಿತಿಯಲ್ಲಿದೆ. ಆದಕಾರಣ ಈಗ ಅಲ್ಲಿ ಟೆಂಪರರಿಯಾಗಿ ಕಟ್ಟಿಸಿಕೊಡುವುದಕ್ಕೆ ಬದಲು ಖಾಯಂ ಆಗಿ ಒಂದೇ ಸಲ ಕಟ್ಟಿಸುವುದು ಒಳ್ಳೆ ಅಲ್ಲಿಯವರೆಗೆ ಇವರುಗಳು ವ್ಯಾಪಾರ ಮಾಡಲು ಬಸ್ಟ್ಯಾಂಡ್ ಹತ್ತಿರ ಇಲ್ಲವೇ ಪ್ಯಾಲೇಸ್ ಹತ್ತಿರವಿರತಕ್ಕಂಥ ಜಾಗದಲ್ಲಿ ಟೆಂಪರರಿಯಾಗಿ ವ್ಯವಸ್ಥೆ ಮಾಡಿಕೊಡಬಹುದು. ವಾಣಿವಿಲಾಸ ಮಾರ್ಕೆಟ್‌ನಲ್ಲಿ ಜಾಗವಿದೆ. ಅಲ್ಲಿ ಬೇಕಾದರೆ ಇವರುಗಳು ತಾತ್ಕಾಲಿಕವಾಗಿ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಬಹುದು. ಮಂಡಿ ಮಾರ್ಕೆಟ್‌ನಲ್ಲಿ ಜಾಗವಿದೆ. ಮತ್ತು ಆಲ್ಲಿನ ಜಯನಗರದಲ್ಲಿ ಒಂದು ಮಾರ್ಕೆಟ್ ಮಾಡಬೇಕೆಂಬ ಪ್ರಪೋಸಲ್ ಇದೆ ಆದಕಾರಣ ಯಾವುದಾದರೂ ಒಂದು ಜಾಗದಲ್ಲಿ ಈ ನೊಂದಿರತಕ್ಕಂಥವರಿಗೆ ಒಂದು ವರ್ಷದವರೆಗೆ ಬಾಡಿಗೆ ಇಲ್ಲದೆ ಜಾಗ ಕೊಟ್ಟರೆ, ಅವರು ವ್ಯಾಪಾರ ಮಾಡಲು ಸಹಾಯ ಮಾಡಿದಂತಾಗುತ್ತದೆ. ಇದರ ಜೊತೆಗೆ ಮತ್ತೊಂದು ಮುಖ್ಯ ಸಂಗತಿ ಎಂದರೆ ಈ ದೇವರಾಜ ಮಾರ್ಕೆಟ್ ಮತ್ತು ಅಲ್ಲಿನ ಕಾರ್ಪೊರೇಷನ್‌ಗೆ ಸೇರಿದ ಬೇರೆ ಕಟ್ಟಡಗಳು ಏನಿಪೆ ಅವೆಲ್ಲಾ ಜೋರಾಗಿ ಮಳೆ ಬಂದರೆ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಇದರಿಂದ ನಾವೇ ಮುಂದಿನ ದುರಂತಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಆದಕಾರಣ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ, ಈಗಾಗಲೇ ತಯಾರು ಮಾಡಿರುವಂತಹ ಮಾಸ್ಟರ್ ಪ್ಲಾನನ್ನು ತಾವು ಒಪ್ಪಿಕೊಂಡು ಹಂತ ಹಂತವಾಗಿ ಕೆಲಸ ಪ್ರಾರಂಭ ಮಾಡಿಸಬೇಕು. ತಾವು ಕೆಲಸ ಒಂದು ಸಲ ಪ್ರಾರಂಭ ಮಾಡಿದರೆ ಹಣಕ್ಕೇನೂ ಕಷ್ಟವಾಗುವುದಿಲ್ಲ. ಹೇಗೆಂದರೆ, ಸಯ್ಯಾಜಿರಾವ್ ರೋಡಿನಲ್ಲಿ ಅನುಗ್ರಹ ಎಂಬ ಹೆಸರಿನ ಒಂದು ಹೋಟೆಲ್ ಇದೆ. ಅದನ್ನು ಕಟ್ಟಲು ಜನರು ದುಡ್ಡು ಕೊಟ್ಟರು. ಅದೇ ರೀತಿ ಈ ಮಾರ್ಕೆಟ್ ಕಟ್ಟಲು ಜನರು ದುಡ್ಡು ಕೊಡಲು ತಯಾರಿದ್ದಾರೆ. ಆದ್ದರಿಂದ ತಾವು ಈ ಬಗ್ಗೆ ಯೋಚನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಮಾರ್ಕೆಟನ್ನು ಹೊಸದಾಗಿ ಕಟ್ಟಿ ಮುಗಿಸುವವರೆಗೆ, ಈಗ ಬೆಂಕಿ ದುರಂತದಲ್ಲಿ ನೊಂದವರಿಗೆಲ್ಲಾ ಬೇರೆ ಮಾರ್ಕೆಟ್‌ಗಳಲ್ಲಿ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಬಹುದು.

ಶ್ರೀ ಡಿ. ಜಯದೇವರಾಜ ಅರಸ್.—ನಾನು ಸಹ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಕಳೆದ ೨೫ ವರ್ಷಗಳಿಂದಲೂ ಆ ಮಾರ್ಕೆಟ್‌ನ್ನು ರೀ-ಮಾಡಲಿಂಗ್ ಮಾಡಬೇಕೆಂದು ಪ್ರಯತ್ನಪಟ್ಟರೂ ಸಹ ಅದು ಸಾಧ್ಯವಾಗಿಲ್ಲ. ಆದ್ದರಿಂದ ಇದೇ ಸಮಯವನ್ನು ತಾವು ಉಪಯೋಗಿಸಿಕೊಂಡು ಆ ಒಂದು ಕೆಲಸವನ್ನು ಮಾಡಬಹುದೆಂದು ನನ್ನ ಭಾವನೆ. ಈಗ ಬೆಂಕಿ ದುರಂತದಿಂದ ತೊಂದರೆಗೆ ಒಳಗಾಗಿರುವವರೆಂದರೆ, ಬಾಳೆಹಣ್ಣು, ತೆಂಗಿನಕಾಯಿ ಹಾಗೂ ಹೂವಿನ ವ್ಯಾಪಾರ ಮಾಡುತ್ತಿದ್ದವರಿಗೆ ಹೆಚ್ಚಿನ ತೊಂದರೆ ಆಗಿದೆ. ಇವರುಗಳಿಗೆ ಬಸ್ಟ್ಯಾಂಡ್ ಬಳಿ ಟೆಂಪರರಿಯಾಗಿ ಷೆಡ್ ಹಾಕಿಕೊಟ್ಟರೆ ಅಲ್ಲಿಯೇ ವ್ಯಾಪಾರ ಮಾಡುತ್ತಾರೆ. ಅವರ ವ್ಯಾಪಾರಕ್ಕೇನೂ ತೊಂದರೆಯಾಗುವುದಿಲ್ಲ. ಆದಕಾರಣ ತಾವು ಮಾಸ್ಟರ್ ಪ್ಲಾನ್ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಲು ಯಾವ ಅಡ್ಡಿಯೂ ಬರಲಾರದು ಒಂದುವೇಳೆ ವ್ಯಾಪಾರಸ್ಥರು ಇದಕ್ಕೆ ಒಪ್ಪದಿದ್ದರೆ, ನಾವೂ ಸಹ ಅವರಿಗೆ ತಿಳುವಳಿಕೆ ಕೊಡಲು ಪ್ರಯತ್ನ ಮಾಡುತ್ತೇವೆ.

ಇನ್ನು ಇಲ್ಲಿ ನೊಂದವರಿಗೆ ಸಹಾಯ ಕೊಡುವ ವಿಚಾರ ಹೇಳಿದ್ದೀರಿ. ನೆನ್ನೆದಿವಸ ನಾನು ಅಲ್ಲಿಗೆ ಹೋದಾಗ ಒಬ್ಬರು ಏನು ಹೇಳಿದರೆಂದರೆ, ಅಲ್ಲಿ ವ್ಯಾಪಾರ ಮಾಡಿಕೊಂಡಿದ್ದ ಒಬ್ಬ ಹೆಂಗಸು, ಅಂಗಡಿ ಸುಟ್ಟುಹೋದ ಮೇಲೆ ತನ್ನ ಜೀವನಕ್ಕೆ ಬೇರೆ ಮಾರ್ಗವೇ ಇಲ್ಲವಂತಾಯಿತು ಎಂದುಕೊಂಡು ವಿಷ ತೆಗೆದುಕೊಂಡಳಂತೆ. ಆಗ ಜನರು ಆ ಹೆಂಗಸನ್ನು ಕೂಡಲೇ ಆಸ್ಪತ್ರೆಗೆ ಕರೆದುಕೊಂಡು ಹೊದಾಗ, ಅಲ್ಲಿ ಡಾಕ್ಟರ್ ಜೀವದಾನ ಕೊಟ್ಟಿದ್ದಾರೆ. ಹೀಗೆ ಅನೇಕ ಸಣ್ಣಪುಟ್ಟ ವ್ಯಾಪಾರಗಾರರಿಗೆ ತಮ್ಮ ವ್ಯಾಪಾರ ಮುಂದುವರೆಸಲು ತೊಂದರೆಯಾಗಿದೆ. ಎಷ್ಟೋ ಜನರು ದಿನವೂ ಮಾರ್ವಾಡಿಗಳ ಹತ್ತಿರ ಸಾಲತಂದು ವ್ಯಾಪಾರ ಮಾಡಿದ ನಂತರ ಬಂದಂತಹ ಲಾಭದಲ್ಲಿ ಮಾರ್ವಾಡಿಗೆ ಹತ್ತು ರೂ.ಗಳನ್ನು ಕೊಟ್ಟು ಉಳಿದ ಹಣದಲ್ಲಿ ತಮ್ಮ ಜೀವನ ಸಾಗಿಸುತ್ತಿದ್ದರು. ಇಂತಹವರು ೩೦–೪೦ ಮಂದಿ ಇರಬಹುದು. ಇಂತಹ ಜನರಿಗೆ ಹೆಚ್ಚಿನ ನೆರವು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಈಗ ಏನು ೨೫೦ ರೂ.ಗಳವರೆಗೆ ಕೊಡಬೇಕೆಂದು ಹೊರಟಿದ್ದೀರಿ, ಅದನ್ನು ೫೦೦ ರೂ.ಗಳವರೆಗೆ ಹೆಚ್ಚು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ರಾಮುದೇವ್. - ಸ್ವಾಮಿ, ಇದೊಂದು ದುರದೃಷ್ಟಕರವಾದಂಥ ಘಟನೆ. ಈ ಮೊದಲು ಬೆಂಗಳೂರಿನಲ್ಲಿ ವೀನಸ್ ಸರ್ಕಸ್ ಸುಟ್ಟಾಗ ಅನೇಕ ಜನರು ಸತ್ತರು. ಆದರೆ ಇಲ್ಲಿ ಯಾರಿಗೂ ಪ್ರಾಣ ಹಾನಿಯಾಗಿಲ್ಲ. ಈ ಒಂದು ಮಾರ್ಕೆಟ್ ಏಲ್ಲಿನ ಮುನಿಸಿಪಾಲಿಟಿಗೆ ಸೇರಿದೆ. ಅಲ್ಲಿ ಮುನಿಸಿಪಾಲಿಟಿಗೆ ಸೇರಿರುವ ಕಟ್ಟಡಗಳು ಏನಿವೆ, ಅವುಗಳನ್ನೆಲ್ಲಾ ಬೆಂಕಿ ಅನಾಹುತದಿಂದ ಪಾರು ಮಾಡಲು ಏನು ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ತಿಳಿಸಬೇಕು. ಏಕೆಂದರೆ, ಈಗ ಸಾರ್ವಜನಿಕರು ಹೋಗತಕ್ಕಂಥ ಹೋಟೆಲ್ಸ್, ಸಿನಿಮಾ ಹಾಗೂ ಬ್ಯಾಂಕ್‌ಗಳಲ್ಲಿ ಏನಾದರೂ ಬೆಂಕಿ ಬಿದ್ದರೆ, ಅದನ್ನು ಕೂಡಲೇ ಹತೋಟಿಗೆ ತರಲು ಫೈರ್ ಎಕ್ಸ್‌ಟಿಂಗ್ ವಿಷರ್ಸ್ ಹಾಗೂ ಫೈರ್ ಫೈಟರ್ಸ್‌ನ್ನು ಇಟ್ಟಿರುತ್ತಾರೆ. ತಾವು ನಾವೆಲ್ಲಾ ಬೇರೆ ಕಂಟ್ರೀಸ್‌ಗೆ ಹೋಗಿದ್ದೇವೆ, ಬೇರೆ ಕ್ಯಾಪಿಟಲ್ ಸಿಟಿಯಲ್ಲಿ ನೋಡಿದ್ದೇವೆ. ಅಲ್ಲೆಲ್ಲಾ ಬೋರ್ಡ್‌ಗಳೇ ಹಾಕಿರುತ್ತಾರೆ ಆದರೆ ಇಲ್ಲಿ ಏಕೆ ಮಾಡುತ್ತಾ ಇಲ್ಲ ಎಂದು ಉದಾಹರಣೆಗೆ ಹೇಳಬೇಕಾದರೆ ೨೨ ಮಹಡಿಯ ಯೂಟಿಲಿಟಿ ಬಿಲ್ಡಿಂಗ್ ಇದೆ. ಬೆಂಗಳೂರು ಸಿಟಿ ಕಾರ್ಪೊರೇಷನ್ ಬಿಲ್ಡಿಂಗ್. ಅಲ್ಲಿ ಫೈರ್ ಏನಾದರೂ ಆದರೆ ಅದಕ್ಕೆ ಏನೇನೂ ಮಾಡಿಲ್ಲ. ಅಕಸ್ಮಾತ್ ಬೆಂಕಿ ಬಿಟ್ಟರೆ ಇಡೀ ಬಿಲ್ಡಿಂಗ್ ನಾಶವಾಗುತ್ತದೆ. ತಾವು ಆಕ್ಟ್ ಮಾಡಿದ್ದೀರಿ, ಅದನ್ನು ಜಾರಿಗೆ ತರುವುದಕ್ಕೆ ಏನೂ ಮಾಡುತ್ತಾ ಇಲ್ಲ. ಮುನಿಸಿಪಾಲಿಟಿ ಬಿಲ್ಡಿಂಗಿಗೇ ಮಾಡದೇಹೋದರೆ ಕಾರ್ಪೊರೇಷನ್ ಬಿಲ್ಡಿಂಗಿಗೆ ಮಾಡದೇಹೋದರೆ ಯಾರು ಮಾಡುವುದಕ್ಕೆ ಆಗುತ್ತದೆ ಆದುದರಿಂದ ಅದನ್ನು ದಯವಿಟ್ಟು ಜಾರಿಗೆ ತರುವಂತೆ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಗಂಗಾಧರನ್‌ರವರು, ಮಾನ್ಯ ಜಯದೇವರಾಜ ಅರಸ್ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರ ಅಭಿಪ್ರಾಯದ ಮೇರೆಗೆ ೧೪೯ ದೂಕಾನ್‌ಗಳು ಏನು ಸುಟ್ಟು ಹೋಗಿವೆ ಅದನ್ನು ಉಪಯೋಗಿಸಿಕೊಂಡು ಬೇರೆ ಕಡೆ ಅಂದರೆ ಬಸ್ ಸ್ಟ್ಯಾಂಡ್‌ನಲ್ಲಿ ವ್ಯಾಪಾರ ಆಗುತ್ತದೆ, ಅದು ಹಾರ್ಟ್ ಆಫ್ ದಿ ಸಿಟಿ ಇದೆ, ಎಂದು ಅವರು ಕೂಡ ಹೇಳಿದರು. ಅಂಗಡಿಗಳವರು ಇವತ್ತು ನಮ್ಮನ್ನು ಹೊರಗೆ ಹಾಕುತ್ತಿದ್ದಾರೆ ಎಂದು ಹೇಳಬಹುದು. ಆದೇ ರೀತಿ ಮಾಡೋಣ ಅದಕ್ಕೆ ತೊಂದರೆಯಾಗಲಾರದು. ಒಂದೊವರೆ ಕೋಟೀದು ಪರ್ಮನೆಂಟ್ ಮಾಸ್ಟರ್ ಪ್ಲಾನ್ ಇದೆ ಅದಕ್ಕೆ ಹುಡ್ಕೊನಿಂದ ಲೋನ್ ಅಸಿಸ್ಟೆನ್ಸ್ ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಈ ೧೪೯ ಷಾಪ್ಸ್ ಕೂಡ ಮಾಡ ತ್ತೇವೆ. ಮತ್ತು ೨೫೦ಕ್ಕಿಂತಲೂ ೫೦೦ ಮಾಡಬೇಕು ಏಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಾ ಇದ್ದಾರೆ, ಅದರ ಬಗ್ಗೆ ಕೂಡ ವಿಚಾರ ಮಾಡೋಣ. ದಿನಾಗಲೂ ೧೦೦ ೨೦೦ ರೂಪಾಯಿ ತಂದು ವ್ಯಾಪಾರ ಮಾಡುವುದು ಇತ್ತು ನಿನ್ನೆ ನೋಡಿದಾಗ ಒಂದು ತರಹ ಇತ್ತು. ಇವತ್ತು ಕೂಡ ರಿಪೋರ್ಟ್ ಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಒಂದಿಷ್ಟು ಮಂಕ್ರಿಯಲ್ಲಿ ಎಲೆ ತೆಗೆದುಕೊಂಡು ಬಂದರೂ ೪೦೦ ೫೦೦ ರೂಪಾಯಿ ಆಗುತ್ತದೆ. ಇವತ್ತಿನ ದಿವಸ ಬೆಲೆ ಏನಾಗಿದೆ ಎಂಬುದು ನಿಮಗೆ ಗೊತ್ತಿದೆ. ಒಂದು ಗೂಡೆ ಹೂವು ತೆಗೆದುಗೂಂಡು ಬಂದರೆ ಒಂದು ಮಾರಿಗೆ ಒಂದು ರೂಪಾಯಿ ಆಗುತ್ತದೆ, ಚಾಸ್ತಿ ಬೆಲೆಯಾಗಿದೆ, ಆದ್ದರಿಂದ ಏನೂರಾದ್ರೂ ಮಾಡಿ ಎಂದು ಹೇಳಿದ್ದು.

ಶ್ರೀ ಧರ್ಮಸಿಂಗ್.—ಮಾಡೋಣ, ಆದಕ್ಕೆ ಪರಿಹಾರ ಇಮ್ಮಿಡಿಯೇಟಾಗಿ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ ಈಗಾಗಲೇ ಸ್ಥಳದಲ್ಲೇ ವರ್ಕ್ ಸ್ಪಾರ್ಟ್ ಮಾಡುವುದರೊಳಗೆ ವ್ಯಾಪಾರ ಮಾಡುವುದಕ್ಕೆ ಮತ್ತು ಬಸ್ ಸ್ಟಾಂಡ್‌ನಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಪಟ್ಟಿ ಕಾಂಪನ್ ಸೇಷನ್ ಕೊಡತಕ್ಕ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಕೂಡ ನಾವು ವ್ಯವಸ್ಥೆ ಮಾಡುತ್ತೇವೆ. ಪರ್ಮನೆಂಟಾಗಿ ಮಾಡಲಿಕ್ಕೆ ತ್ವರಿತಗತಿಯಿಂದ ಅಲ್ಲಿ ಸಾಕಷ್ಟು ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಾ ಕಡೆ ಮಾರ್ಕೆಟ್‌ನಲ್ಲಿ ಹಳೇ ಗೂಡುಗಳೇನಿವೆ ಅಲ್ಲಿ ಎಲೆಕ್ಟ್ರಿಫಿಕೇಷನ್ ಮಾಡಲಿಕ್ಕೆ ಆಗುತ್ತಾ ಇದೆ. ಮಾನ್ಯ ರಾಂದೇವ್ ಅವರು ಹೇಳುತ್ತಾ ಇದ್ದರು ಅವರು ಬೆಂಗಳೂರು ಮತ್ತು ಬೇರೆ ಕಡೆ ಎಲ್ಲಾ ಹೀಗೆ ಆಗುತ್ತದೆ ಕ್ರಮ ತೆಗೆದುಕೊಳ್ಳಬೇಕು ಎಂದ ಹೇಳಿದರು. ಈ ದುರಂತ ಘಟನೆಗಳು ಆದನಂತರ ಸಾಕಷ್ಟು ಅನುಭವ ಬರುತ್ತಾ ಇದೆ. ಇದರ ಬಗ್ಗೆ ಸಾಕಷ್ಟು ವಿಚಾರ ಮಾಡುತ್ತೇವೆ. ಆಲ್ಲಿ ೭೦೦ಶಾಪ್ಸ್ ಇವೆ. ಸುದೈವದಿಂದ ಸಾಕಷ್ಟು ಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ಎಂಟ್ರೆರ್ ಮಾರ್ಕೆಟ್ ಸುಟ್ಟು ಸಯ್ಯಾಜಿರಾವ್ ರೋಡಿಗೂ ಬಂದು ಆಲ್ಲಿಗೂ ಹಬ್ಬತಕ್ಕಂಥಾದ್ದು ಇತ್ತು. ೧೪೯ ಅಂಗಡಿಗಳು ಮಾತ್ರ ಸುಟ್ಟುಹೋಗಿವೆ. ಎಂಟ್ರೆರ್ ಮಾರ್ಕೆಟ್ ಸುಟ್ಟುಹೊಗತಕ್ಕಂಥಾದ್ದು ಉಳಿದಿದೆ. ಹಳೆಯ ಗೂಡುಗಳು ಏನು ವೈರಿಂಗ್ ಆಗಿದೆ ಅದನ್ನೆಲ್ಲಾ ನೋಡಬೇಕು ಎಂದು ಕೊಟ್ಟಿದ್ದೇನೆ ಮಾನ್ಯ ಸದಸ್ಯರು ಏನೇನು ಸೂಚನೆ ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು,—ಈಗ ಮಾನ್ಯ ಸದಸ್ಯರಾದ ಎಲ್.ಟಿ. ತಿಮ್ಮಪ್ಪ ಹೆಗ್ಗಡೆಯವರು.

SRI D. DEVARAJ URS.—Sir, I wanted to raise a point after the speech of the hon. Member and before the House adjourns.

MR SPEAKER. - Yes.

Financial Business Discussion (Contd)

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ) –ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರತಕ್ಕಂಥ ೧೯೮೧–೮೨ನೇ ಸಾಲಿನ ಮಂಗಡಪತ್ರವನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತಿಸುತ್ತೇನೆ. ಸ್ವಾಗತ ಮಾಡುವುದು ಅಂದರೆ, ನಾನು ಆಡಳಿತ ಪಕ್ಷದಲ್ಲಿರುವುದರಿಂದಲೇ ಸ್ವಾಗತ ಮಾಡುವುದು ಎನ್ನುವ ಅರ್ಥವಿಲ್ಲ. ಸ್ವಾಗತ ಮಾಡುವುದಕ್ಕೆ ಅನೇಕವಾಂಥ ವಿಶೇಷ ಕಾರಣಗಳಿವೆ. ಏಕೆಂದರೆ, ಈ ವರ್ಷದಲ್ಲಿ ಇರತಕ್ಕಂಥ ವಿಶೇಷ ಪರಿಸ್ಥಿತಿ, ೧೯೨೨ ತಾಲ್ಲೂಕುಗಳಲ್ಲಿರತಕ್ಕ ಬರಗಾಲ ಆಮೇಲೆ ಅತಿವೃಷ್ಟಿಯಿಂದ ಮಲೆನಾಡು ತಾಲ್ಲೂಕುಗಳಲ್ಲಿ ಅನೇಕ ಕಡೆ ಕೃಷಿ ಹಾಳಾಗಿ, ಬೆಳೆ ಹಾಳಾಗಿ, ಇದರಿಂದ ತೊಂದರೆಯಾಗಿದೆ. ಇಂತಹ ವಿಶೇಷ ತೊಂದರೆಯ ಸ್ಥಿತಿಯಲ್ಲೂ ಕೂಡ ಈ ಒಂದು ಬಜೆಟ್ಟನ್ನು ತರುವಾಗ. ರಾಜ್ಯವೂ ಕೂಡ ಅನೇಕ ಆರ್ಥಿಕ ತೊಂದರೆಗಳಿಲ್ಲಿರುವಾಗ, ಬುದ್ಧವಂತಿಕೆಯಿಂದ ಮತ್ತೆ ಏನು ಸೂತ್ರವನ್ನಿಟ್ಟುಕೊಂಡು ತಂದರು ಎನ್ನುವುದಕ್ಕಾಗಿ ನಾವು ಈಗ ಇದನ್ನು ವೀಕ್ಷಿಸಬೇಕಾಗಿದೆ. ಮಾನ್ಯ ಅಧ್ಯಕ್ಷರೆ. ಮೊಟ್ಟ ಮೊದಲನೆಯದಾಗಿ. ಮಾನ್ಯ ಮಿತ್ರರಾದಂಥ ಜೆ. ಹೆಚ್. ಪಟೇಲರು ಮಾತನಾಡುವಾಗ ಹೇಳಿದರು. ಕಮ್ಯುನಿಸ್ಟ್ ದೇಶಗಳಲ್ಲಿ ಚೈನಾ ದೇಶದಲ್ಲಿ ಯಾವರೀತಿ ಸುಖ ಸಂತೋಷಗಳಿವೆ, ಕಮ್ಯುನಲ್‌ಗಳನ್ನು ಮಾಡಿ ಆರ್ಥಿಕ ಸ್ಥಿತಿ ಹೆಚ್ಚಿಗೆ ಮಾಡಿದ್ದಾರೆ ಪ್ರಾಮಾಣಿಕತೆ ಹೇಗೆ ಇದೆ. ಪೋಲೀಸ್ ಇಲ್ಲದೆ ರಾಜ್ಯ ನಡೆಸುವುದಕ್ಕೆ ಏನು ವ್ಯವಸ್ಥೆ ಇದೆ ಎಂದು ಕೇಳಿದೆವು. ನಮಗೆ ಅದು ಒಂದು ತರಹ ಸಂತೋಷವಾದಂಥ ಮೆಚ್ಚುಗೆಯಾದಂಥ ರೀತಿಯಲ್ಲಿ ಕಾಣಿಸಿತು. ಇಲ್ಲಿ ಅದನ್ನು ಮಾಡಲಿಕ್ಕೆ ಸಾಧ್ಯವೇ ಅಂದರೆ ಇಲ್ಲ. ಇದು ಪ್ರಜಾಪ್ರಭುತ್ವ ರಾಷ್ಟ್ರ, ಅದನ್ನೆ ಬೆಳೆಸಿಕೊಂಡು ಹೋಗುವುದು. ಘಟೋದ್ಗಜನ ಮಾಯಾಬಜಾರ್ ಕತೆ ಮಹಾಭಾರತದಲ್ಲಿ ಕೇಳುತ್ತೇವೆ, ಹಾಗೆ ಮಾಯಾಬಜಾರ್ ಮಾಡಿ ಏನಾದರೂ ದುಡ್ಡನ್ನು ತರಲಿಕ್ಕೆ ಸಾಧ್ಯವೇ ಅಂತ ಹೇಳಿದರೆ ಇಲ್ಲ. ಮಾನ್ಯವಿತ್ತ ಸಚಿವರು ಬಜೆಟ್ಟನ್ನು ಮಂಡಿಸುವಾಗ ಅದನ್ನು ಮಾಡಲಿಕ್ಕೂ ಸಾಧ್ಯವಿಲ್ಲ. ಅಥವಾ ಭುವನೇಶ್ವರಿಯ ದಯೆಯಿಂದ ವಿದ್ಯಾರಣ್ಯರು ವಿಜಯನಗರ ಸ್ಥಾಪನೆ ಕಾಲದಲ್ಲಿ ಹೊನ್ನಿನ ಮಳೆ ಸುರಿಸಿದ ಹಾಗೆ ಮಾಡಲಿಕ್ಕೂ ಸಾಧ್ಯವೇ ಇಲ್ಲ. ನಮ್ಮಲ್ಲಿರತಕ್ಕ ಸಂಪನ್ಮೂಲಗಳನ್ನು ಬಳಸಿಕೊಂಡೇ ನಮ್ಮ ಖರ್ಚುವೆಚ್ಚಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು